# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | 2746 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 28.03.2022 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ವೈದ್ಯಕೀಯ ಶಿಕ್ಷಣ ಇಲಾಖೆಯ ಬಯೋಕೆಮಿಸ್ಟ್ರಿ ಮತ್ತು ಮೈಕ್ರೋಬಯಾಲಜಿ ಉಪನ್ಯಾಸಕರ ಹುದ್ದೆಗೆ ಕೆ.ಪಿ.ಎಸ್.ಸಿ ಮುಖಾಂತರ ಆಯ್ಕೆಯಾಗಿ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ (ಬಿ.ಎಂ.ಸಿ) ಕ್ಕೆ 2006 ರಲ್ಲಿ ನೇಮಕಗೊಂಡಿದ್ದ ಉಪನ್ಯಾಸಕರನ್ನು 2008 ರಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಮಾಡಲಾದ ಬಿ.ಎಂ.ಸಿ.ಆರ್.ಐ ಸಂಸ್ಥೆಯಲ್ಲಿ ಇದುವರೆವಿಗೂ ವಿಲೀನ ಮಾಡದೆ, ಪುನರ್ ಪದನಾಮೀಕರಣವನ್ನು ಮಾಡದೆ, ಕಾಲಬದ್ಧ ಪದೋನ್ನತಿಯನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಸದರಿ ಉಪನ್ಯಾಸಕರು ಎಂ.ಸಿ.ಐ/ಎನ್.ಎಂ.ಸಿ ನಿಯಮಾವಳಿಗಳ ಪ್ರಕಾರ ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಹತೆ ಹೊಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ<br>ಈ ಹಿಂದೆ ಸದರಿ ಉಪನ್ಯಾಸಕರು ಎಂ.ಸಿ.ಐ/ ಎನ್.ಎಂ.ಸಿ ನಿಯಮಾವಳಿಗಳ ಪ್ರಕಾರ ಅರ್ಹತೆಯನ್ನು ಹೊಂದಿಲ್ಲದ ಕಾರಣದಿಂದ ವಿಲೀನಾತಿಗೊಂಡಿರುವುದಿಲ್ಲ. ಪ್ರಸ್ತುತದಲ್ಲಿ ಸದರಿಯವರು ನಿಗದಿತ ವಿದ್ಯಾರ್ಹತೆಯನ್ನು ಹೊಂದಿದ್ದು, ಸಂಸ್ಥೆಯಲ್ಲಿ ಲಭ್ಯವಿರುವ ಹುದ್ದೆಗನುಗುಣವಾಗಿ ವಿಲೀನಾತಿ/ ಮರುಪದನಾಮೀಕರಣದ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. |
| ಇ) | ಬಂದಿದ್ದಲ್ಲಿ, ಇವರುಗಳಿಗೆ ಇದುವರೆಗೆ ಪದೋನ್ನತಿ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

ಸಂಖ್ಯೆ: ಎಂಇಡಿ 186 ಎಂಎಂಸಿ 2022

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು